ಆ) ಈ ಮೇಲಿನ ಪೊಲೀಸ್ ರಾಣೆಗಳಲ್ಲಿ ತೆರವು ಇರುವ ಎ ಎಸ್ ಐ/ಹೆಚ್ ಸಿ ಹುದ್ದೆಗಳನ್ನು ಮುಂಬಡ್ತಿಯಲ್ಲಿ ತುಂಬಲು ಕ್ರಮ ಜರುಗಿಸಲಾಗುತ್ತಿದೆ ಹಾಗೂ ತೆರವು ಇರುವ ಸಿ ಪಿ ಸಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಪ್ರಕ್ರಿಯೆ ನಡೆದಿರುತ್ತದೆ

ಇ) ಬಂಟ್ವಾಳ ವೃತ್ತದ ವಿಟ್ಲ ರಾಣಾ ಸರಹದ್ದಿನ ಕೇಪು ಗ್ರಾಮದ ಸಾರಡ್ಯ ಎಂಬಲ್ಲಿ ಕಲ್ಲಡ್ಕ–ಕಾಂಗಾಡ್ ರಾಜ್ಯ ಹೆದ್ದಾರಿ 88 "ಸಿ" ಯಲ್ಲಿ ಪೊಲೀಸ್ ಚೆಕ್ ಪೋಸ್ಟ್ ಇರುತ್ತದೆ ಈ ಚೆಕ್ ಪೋಸ್ಟ್ ಗೆ ವಿಟ್ಲ ರಾಣೆಯಲ್ಲಿ ಲಭ್ಯವಿರುವ ಸಿಬ್ಬಂದಿ ಬಲದಿಂದಲೇ ಸಿಬ್ಬಂದಿ ನಿಯೋಜಿಸಿಕೊಂಡು ಈ ಚೆಕ್ ಪೋಸ್ಟ್ ನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ

ಈ) ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ

ಉ) ಸೂಕ್ಷ್ಮ ಹಾಗೂ ಗಡಿ ಪ್ರದೇಶಗಳಲ್ಲಿ ನಿಗಾ ವಹಿಸುವ ಬಗ್ಗೆ ಪೋಲಿಸ್ ರಾಣೆಯ ಸಿಬ್ಬಂದಿಯನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿ ಅವರಿಂದ ಎಲ್ಲಾ ವಾಹನಗಳ ತಪಾಸಣೆ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗಿದೆ

**402 (828) ಶ್ರೀ ಪಾಟೀಲ್ ಡಿ ಆರ್ (ಗದಗ್)** . ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ–ಬಿಜಾಪೂರ ಬ್ರಾಡ್‌ಗೇಜ್ ಪರಿವರ್ತನೆಗೆ ಬೇಕಾಗುವ ಅಂದಾಜು ಹಣ ಎಷ್ಟು,

ಆ) ಇದರಲ್ಲಿ ರಾಜ್ಯ ಸರಕಾರದ ಪಾಲೆಷ್ಟು,

ಇ) ಈ ಯೋಜನೆಗೆ ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾದ ಹಣ ಎಷ್ಟು (ವರ್ಷಾವಾರು ವಿವರ ನೀಡುವುದು),

ಈ) ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

**ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಅ) ಗದಗ–ಬಿಜಾಪುರ ಬ್ರಾಡ್ ಗೇಜ್ ಪರಿವರ್ತನೆಗೆ ರೂ 404 ಕೋಟಿಗಳು ಬೇಕಾಗುವುದೆಂದು ಅಂದಾಜಿಸಲಾಗಿದೆ

ಆ) ಇದರಲ್ಲಿ 01 01 2002 ರ ನಂತರ ರಾಜ್ಯ ಸರ್ಕಾರದ ಪಾಲು ರೂ 118 038 ಕೋಟಿಗಳು

ಇ) ಈ ಯೋಜನೆಗೆ ಕಳೆದ 5 ವರ್ಷಗಳಲ್ಲಿ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾದ ಹಣದ ವಿವರ ಈ ಕೆಳಗಿನಂತಿದೆ

| ವರ್ಷ | ಬಿಡುಗಡೆಯಾದ ಮೊತ್ತ (ಕೋಟಿ ರೂ ಗಳಲ್ಲಿ) |
|---|---|
| 2002–2003 | 2 00 |
| 2003–2004 | 11 00 |
| 2004–2005 | 23 00 |
| 2005–2006 | 53 36 |
| 2006–2007 | 20 00 |
| ಒಟ್ಟು | 109 36 |

ಈ) ರೈಲ್ವೆ ಇಲಾಖೆಗೆ ಈ ಹಣ ಮುಂದಿನ ಆರ್ಥಿಕ ವರ್ಷದಲ್ಲಿ ಬೇಕಾಗಿದ್ದು, ಆಗ ಬಿಡುಗಡೆ ಮಾಡಲಾಗುವುದು

**403 (829) ಶ್ರೀ ಪಾಟೀಲ್ ಡಿ ಆರ್ (ಗದಗ್)** ಮಾನ್ಯ ಶ್ರೀ ಎಂ ಪಿ ಪ್ರಕಾಶ್ ಗೃಹ, ಕಾನೂನು, ನ್ಯಾಯಾ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ಕ್ಯಾಲೆಂಡರ್ ವರ್ಷಗಳಲ್ಲಿ ಸದನ ಕಲಾಪ ನಡೆಸಿದ ದಿನಗಳೆಷ್ಟು,

ಆ) ಕಾನೂನು ಪ್ರಕಾರ ಕನಿಷ್ಠ ದಿನಗಳಾದರೂ ಸದನ ನಡೆಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಇ) ಈ ಸದನದ ಇತಿಹಾಶದಲ್ಲಿ ಯಾವ ವರ್ಷ ಅತೀ ಹೆಚ್ಚು ದಿನ ಹಾಗೂ ಅತಿ ಕಡಿಮೆ ದಿನ ಕಲಾಪ ನಡೆಸಲಾಗಿದೆ, ಆಗ ಸರ್ಕಾರದ ನೇತೃತ್ವ ವಹಿಸಿದವರಾರು (ಮುಖ್ಯಮಂತ್ರಿಗಳಾರು),

ಈ) ಈ ವರ್ಷವಾದರೂ ಕಾನೂನು ಪ್ರಕಾರ ಕನಿಷ್ಟ ದಿನಗಳಾದರೂ ಸದನ ಕಲಾಪ ನಡೆಸಲು ಕ್ರಮ ಕೈಗೊಳ್ಳಲಾಗುವುದೇ,